ನೆಲಮಂಗಲ ಕ್ಷೇತ್ರದಲ್ಲಿರುವ ಕೆರೆಗಳ ದುರಸ್ತಿ

೧೨೭೦. ಶ್ರೀ ಬಿ.ಗುರುಪ್ರಸಾದ್(ನೆಲಮಂಗಲ).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿರುವ ನೀರಾವರಿ ಕೆರೆಗಳೆಷ್ಟು ?

ಆ) ಅವುಗಳ ಪೈಕಿ ಎಷ್ಟು ಕೆರೆಗಳಿಗೆ ತುರ್ತು ದುರಸ್ತಿ ಮಾಡಬೇಕಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ೧೩೮

ಆ) ೪೭

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಅಧ್ಯಕ್ಷರೆ, ಲಿಖಿತ ಮೂಲಕ ನೀಡಲಾದ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಇಡಲಾಯಿತು.

ಸರಕಾರದ ಸಚಿವಾಲಯದಲ್ಲಿ ೫ ವರ್ಷಕ್ಕೂ ಮೇಲ್ಪಟ್ಟು ಕೆಲಸ ನಿರ್ವಹಿಸುತ್ತಿರುವ ನೌಕರರ ಬಗ್ಗೆ

೭೯೭. ಶ್ರೀ ಗೋಪಾಲ ಮಂಕಂದ ಕಾನಡೆ (ಹಿರ್ಲಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಎಲ್ಲಾ ಇಲಾಖೆಗಳಲ್ಲಿನ ಒಟ್ಟು ಅಧಿಕಾರಿಗಳ ಮತ್ತು ನೌಕರರ ಸಂಖ್ಯೆ ಎಷ್ಟು ?

ಆ) ಸದರಿ ಅಧಿಕಾರಿಗಳು ಮತ್ತು ನೌಕರರು ಐದು ವರ್ಷ ಮೇಲ್ಪಟ್ಟು ಒಂದೇ ಕಡೆ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ?

ಇ) ಹಾಗಿದ್ದಲ್ಲಿ ಸದರಿ ಅಧಿಕಾರಿಗಳನ್ನು ಹಾಗೂ ನೌಕರರನ್ನು ಹೊರಗಡೆ ಕಳುಹಿಸಲು ಇರುವ ತೊಂದರೆಗಳೇನು ?

ಈ) ಹಾಗಿಲ್ಲದಿದ್ದಲ್ಲಿ ಅಧಿಕಾರಿಗಳನ್ನು ಮತ್ತು ನೌಕರರನ್ನು ಹೊರಗಡೆ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ)

ಅಖಿಲ ಭಾರತ ಸೇವಾ ಅಧಿಕಾರಿಗಳು		೪೭
ಗ್ರೂಪ್–ಎ ಅಧಿಕಾರಿಗಳು		೧೭೫
ಗ್ರೂಪ್–ಬಿ	,,	೩೦೯
ಗ್ರೂಪ್–ಸಿ	,,	೨೦೫೩
ಗ್ರೂಪ್–ಡಿ	,,	೮೫೩
ಒಟ್ಟಿಗೆ ...		೩೪೩೭

ಅ)	ಅಖಿಲ ಭಾರತ ಸೇವಾ ಅಧಿಕಾರಿಗಳು	...
	ಗ್ರೂಪ್-ಎ ಅಧಿಕಾರಿಗಳು	೨೦
	ಗ್ರೂಪ್-ಬಿ ,,	೮೨
	ಗ್ರೂಪ್-ಸಿ ,,	೨೯೧
	ಗ್ರೂಪ್-ಡಿ ,,	೧೩೯
	ಒಟ್ಟು ...	೫೩೨

ಸಚಿವಾಲಯವು ಒಂದು ಸ್ವತಂತ್ರ ಘಟಕವಾಗಿದ್ದು ಸಚಿವಾಲಯದ ಅಧಿಕಾರಿಗಳನ್ನು/ನೌಕರರನ್ನು ಬೇರೆ ಕಡೆ ವರ್ಗ ಮಾಡುವುದು ಸಾಧ್ಯವಾಗುವುದಿಲ್ಲ. ಆದರೆ ಕೆಲವು ಅಧಿಕಾರಿಗಳು/ನೌಕರರನ್ನು ನಿಯೋಜನೆಯ ಮೇಲೂ ಮತ್ತು ಕ್ಷೇತ್ರ ತರಬೇತಿ ನಿಯಮಗಳ ಅಡಿಯಲ್ಲಿ ಬೇರೆ ಇಲಾಖೆಗಳಿಗೆ ಕಳುಹಿಸಲಾಗುತ್ತಿದೆ.

ಇ) ಭಾಗದ ಪ್ರಶ್ನೆಗೆ ನೀಡಿರುವ ಉತ್ತರದಿಂದ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಲೋಕೋಪಯೋಗಿ ಇಲಾಖೆಯಲ್ಲಿ ಪದವೀಧರ ಹಾಗೂ ಪದವಿಯೇತರ ವೇತನ ಶ್ರೇಣಿಯಲ್ಲಿನ ತಾರತಮ್ಯದ ಬಗ್ಗೆ

೧೫೭೧. ಶ್ರೀ ವೇದಾಂತ ಹೆಬ್ಬಿಗೆ, ಜಿ. ರಾಜೂಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೆ ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪದವೀಧರ ಹಾಗೂ ಪದವಿಯೇತರ ವೇತನ ಶ್ರೇಣಿಯಲ್ಲಿ ತಾರತಮ್ಯವಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ಕೈಕೊಳ್ಳುವ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ತಾರತಮ್ಯ ಇದೆ ಎಂದು ಹೇಳಲಾಗುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗ್ರಾಮಾಂತರ ರಸ್ತೆಗಳಿಗೆ ಡಾಂಬರು ಹಾಕಿಸುವ ಬಗ್ಗೆ

೧೦೪೨. ಶ್ರೀ ಜಿ. ರಾಮದಾಸ್(ಹೊಸದುರ್ಗ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಗ್ರಾಮಾಂತರ ರಸ್ತೆಗಳಿಗೆ ಡಾಂಬರು ಹಾಕಿಸುವ ಉದ್ದೇಶ ಸರ್ಕಾರದವರಿಗಿದೆಯೆ,

ಆ) ಹಾಗಿದ್ದಲ್ಲಿ ಎಷ್ಟು ಕಿಲೋ ಮೀಟರ್ ರಸ್ತೆಗೆ ಈಗ ಡಾಂಬರು ಹಾಕಲು ಗುರಿ ಹೊಂದಲಾಗಿದೆ,

ಇ) ಹೊಸದುರ್ಗದಿಂದ ಜಾನಕಲ್ ಮಾರ್ಗವಾಗಿ ಶಿವಗಂಗೆ ಹೋಗುವ ರಸ್ತೆ ದುರಸ್ತಿಯಾಗದೆ ಹಲವಾರು ವರ್ಷಗಳಿಂದ ತಗ್ಗು ಗುಂಡಿಗಳಾಗಿ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,